ಕೋಶ ರಚನೆ

9 19 ರಾಜ್ಯ, ಕೇಂದ್ರ ಮತ್ತು ನೆರೆ ರಾಜ್ಯಗಳಲ್ಲಿ ಆಗಿಂದಾಗ್ಗೆ, ಪರಿಷ್ಕರಣೆಗೊಳ್ಳುವ ವೇತನ ರಚನೆ, ಭತ್ಯೆಗಳ ಬಗ್ಗೆ ಅಂಕಿ ಅಂಶಗಳನ್ನು ಮತ್ತು ಮಾಹಿತಿಯನ್ನು ನಿರ್ವಹಿಸಲು ಒಂದು **"ವೇತನ ಸಂಶೋಧನಾ ಕೋಶವನ್ನು"** ರಚಿಸುವುದು ಸೂಕ್ತವೆಂದು ಆಯೋಗವು ಭಾವಿಸುತ್ತದೆ ಈ ಕೋಶವು ವೇತನ ಪರಿಷ್ಕರಣೆಯಾದ ನಂತರ ಉದ್ಭವಿಸಬಹುದಾದ ವೇತನಗಳಲ್ಲಿನ ಅಸಮಾನತೆ, ತಾರತಮ್ಯತೆ ಮತ್ತಿತರ ಸಮಸ್ಯೆಗಳನ್ನು ಪರಿಶೀಲಿಸಿ, ವಿಶ್ಲೇಷಿಸಿದ ವರದಿಗಳನ್ನು ಮುಂದೆ ಸರ್ಕಾರವು ರಚಿಸಬಹುದಾದಂತಹ ವೇತನ ಆಯೋಗ, ಅಧಿಕಾರಿಗಳ ಸಮಿತಿ ಮತ್ತು ವೇತನ ತಾರತಮ್ಯ ಸಮಿತಿಗಳ ಉಪಯೋಗಕ್ಕೆ ಸಲ್ಲಿಸಬಹುದು

1344 (1449) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) – ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಪ್ರಥಮ ದರ್ಜೆ ಗ್ರಾಮ ಪಂಚಾಯತಿ ಕಾರ್ಯದರ್ಶಿ ಹುದ್ದೆಗಳು ಎಷ್ಟು? ಹಾಗೂ ಇವುಗಳಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು,

ಆ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಯಾವ ಇಲಾಖೆಗಳ ಸಿಬ್ಬಂದಿಗಳನ್ನು ತೆಗೆದುಕೊಳ್ಳಲು ಅವಕಾಶವಿದೆ, (ಇಲಾಖಾವಾರು ನಿಗದಿ ಮಾಡಿದ ಹುದ್ದೆಗಳ ವಿವರ ನೀಡುವುದು),

ಇ) ಈಗಾಗಲೇ ಭರ್ತಿ ಮಾಡಿರುವ ಇಲಾಖಾವಾರು ನೌಕರರುಗಳ ಸಂಖ್ಯೆ ಎಷ್ಟು,

ಈ) ಇಲಾಖಾವಾರು ಕೊರತೆ ಬಿದ್ದಿರುವ ಸಂಖ್ಯೆಗಳು ಎಷ್ಟು,

ಉ) ಕೊರತೆ ಇರುವ ಇಲಾಖೆವಾರು ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು,

ಊ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ತುಮಕೂರು ಜಿಲ್ಲೆಯಲ್ಲಿ ಗ್ರೇಡ್–1 ಕಾರ್ಯದರ್ಶಿ ಹುದ್ದೆಗಳು 156 ಖಾಲಿ ಹುದ್ದೆ – 2

ಆ) ಅ)ಶೇಕಡ 60 ರಷ್ಟು ಹುದ್ದೆಗಳನ್ನು ಗ್ರೇಡ್–2 ಕಾರ್ಯದರ್ಶಿಗಳ ಮುಂಬಡ್ತಿಯಿಂದ

ಆ) ಶೇಕಡ 20 ರಷ್ಟು ಹುದ್ದೆಗಳನ್ನು ನೇರ ನೇಮಕಾತಿಯಿಂದ

ಇ) ಶೇಕಡ 20 ರಷ್ಟು ಹುದ್ದೆಗಳನ್ನು ಕಂದಾಯ ಇಲಾಖೆಯ ನೌಕರರಿಂದ

ಇ)

ಗ್ರಾಅಪ ಇಲಾಖೆ	ಕಂದಾಯ ಇಲಾಖೆ	ಕೃಷಿ ಇಲಾಖೆ	ಶಿಕ್ಷಣ ಇಲಾಖೆ	ರೇಷ್ಮೆ ಇಲಾಖೆ
122	17	02	05	08

ಈ) ಕಂದಾಯ ಇಲಾಖೆಯಿಂದ ಮಾತ್ರ ನಿಯೋಜನೆ ಮೇಲೆ ನೇಮಿಸಿಕೊಳ್ಳಲು ವ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುತ್ತದೆ ಇತರೆ ಇಲಾಖೆಗಳಿಂದ ನೇಮಿಸಿಕೊಳ್ಳಲು ಅವಕಾಶವಿರುವುದಿಲ್ಲ ಆದಕಾರಣ ಕಂದಾಯ ಇಲಾಖೆಯಿಂದ ನಿಯೋಜಿಸಬೇಕಾಗಿದ್ದ 31 ಹುದ್ದೆಗಳಲ್ಲಿ 14 ಹುದ್ದೆಗಳು ಕೊರತೆಯಾಗಿರುತ್ತವೆ ಈ ಹುದ್ದೆಗಳಿಗೆ ಕೆಳಕಂಡ ಇಲಾಖೆಗಳಿಂದ ನಿಯೋಜನೆ ಮೇಲೆ ಭರ್ತಿ ಮಾಡಿಕೊಳ್ಳಲಾಗಿದೆ

1) ಕೃಷಿ ಇಲಾಖೆಯಿಂದ –2 (2) ಶಿಕ್ಷಣ ಇಲಾಖೆಯಿಂದ – 5

3) ರೇಷ್ಮೆ ಇಲಾಖೆಯಿಂದ – 08 (4) ಕಂದಾಯ ಇಲಾಖೆಯಿಂದ – 17

ಉ) ಕಂದಾಯ ಇಲಾಖೆಯಿಂದ ಭರ್ತಿ ಮಾಡಬೇಕಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಹಲವಾರು ಬಾರಿ ಪತ್ರ ಬರೆಯಲಾಗಿದೆ ಕಾರಣಾಂತರಗಳಿಂದ ಅವರಿಂದ ನಿಯೋಜನೆ ಆಗಿರುವುದಿಲ್ಲ ಅದುದರಿಂದ ಇತರೆ ಇಲಾಖೆಯವರನ್ನು ನಿಯೋಜನೆ ಮೇಲೆ ನೇಮಿಸಿಕೊಳ್ಳಲಾಗಿದೆ

ಊ) ಕಂದಾಯ ಇಲಾಖೆಯಿಂದ ನಿಯೋಜನೆ ಕೋಟಾದಡಿಯ ಹುದ್ದೆಗಳಿಗೆ ನೌಕರರನ್ನು ನಿಯೋಜಿಸಿದರೆ ಈಗ ಕಾರ್ಯನಿರ್ವಹಿಸುತ್ತಿರುವ ಇತರೆ ಇಲಾಖೆಯವರ ಸೇವೆಯನ್ನು ಹಿಂತಿರುಗಿಸಿ ಕಂದಾಯ ಇಲಾಖಾ ನೌಕರರನ್ನು ನೇಮಿಸಿಕೊಳ್ಳಲಾಗುವುದು

1345 (1450) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) – ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾಗಿರುವ ಸಬ್ಸಿಡಿ ಮೊತ್ತವೆಷ್ಟು (ಕಳೆದ ಮೂರು ವರ್ಷಗಳ ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಶಿವಾನಂದ ಎಸ್ ನಾಯ್ಕ್ (ಸಣ್ಣ ಕೈಗಾರಿಕಾ ಸಚಿವರು)

ಅ) ರಾಜ್ಯದಲ್ಲಿ ದಿನಾಂಕ 31–03–2006 ರ ಅಂತ್ಯಕ್ಕೆ ರೂ 202 50 ಕೋಟಿ ಸಹಾಯಧನ ಬಾಕಿ ಇರುತ್ತದೆ ವಿವಿಧ ವರ್ಗಗಳಿಗೆ ವಿವಿಧ ಅವಧಿಗೆ ಬಾಕಿಯಿರುವ ಸಹಾಯಧನ ವಿವರಗಳು ಕೆಳಕಂಡಂತಿರುತ್ತವೆ

(ರೂ ಕೋಟಿಗಳಲ್ಲಿ)

ಕ್ರ.ಸಂ.	ವರ್ಗ/ಅವಧಿವಾರು ವಿವರಗಳು	ಶೇಕಡವಾರು	ಮೊತ್ತ
1	ಸ್ವಂತ ಬಂಡವಾಳ ಹೂಡಿದ ರೇಷ್ಮೆ ಮತ್ತು ಜವಳಿ ಘಟಕಗಳು 1–4–2003 ರಿಂದ 31–3–2006	ಶೇ 100	7 17
2	ಸ್ವಂತ ಬಂಡವಾಳ ಹೂಡಿದ ಘಟಕಗಳು· 1–1–1999 ರಿಂದ 31–3–2006	ಶೇ 100	65 49